**M.V.C.No.1610/2021** **PW-1**

ಚನ್ನರಾಜು ಬಿನ್ ಚನ್ನ

ದಿನಾಂಕಃ **31/01/2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ **2**ನೇ ಎದುರುದಾರರ ಪರವಾಗಿ ಶ್ರೀ ಯು.ಎಂ.ಸಿ. ವಕೀಲರಿಂದಃ

ನಾನು ವಿದ್ಯಾಭ್ಯಾಸ ಮಾಡಿಲ್ಲ. ನಿಪಿ.8 ರ ಆಧಾರ್ ಕಾರ್ಡ್ ನನಗೆ ಸಂಬಂಧಪಟ್ಟಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತದೆ. KA 12 J 6904 ರ ಮೋಟಾರ್ ಸೈಕಲ್ ನನಗೆ ಸಂಬಂಧಪಟ್ಟಿರುತ್ತದೆ. ಸದರಿ ಮೋಟಾರ್ ಸೈಕಲ್ ನ ಆರ್.ಸಿ ನನ್ನ ಹೆಸರಿನಲ್ಲಿರುತ್ತದೆ. ನನಗೆ ಮೋಟಾರ್ ಸೈಕಲ್ ಚಲಾಯಿಸಲು ಪರವಾನಗಿ ಇದೆ ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಮೋಟಾರ್ ಸೈಕಲ್ ಗೆ ಅಪಘಾತದ ಸಂದರ್ಭದಲ್ಲಿ ವಿಮೆ ಇತ್ತು ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತದ ದಿನಾಂಕವನ್ನು ಹೇಳಲು ಆಗುವುದಿಲ್ಲ. ನನಗೆ ಅಪಘಾತ ಪಡಿಸಿದ ಟ್ರ್ಯಾಕ್ಟರ್ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ಅಪಘಾತ ಪಡಿಸಿದ ಟ್ರ್ಯಾಕ್ಟರ್ ಅರಕಲಗೂಡು ಕಡೆಯಿಂದ ರಾಮನಾಥಪುರದ ಕಡೆಗೆ ಹೋಗುತ್ತಿತ್ತು. Tobacco Board ಹತ್ತಿರ ಅಪಘಾತ ಆಗಿರುತ್ತದೆ. ರಸ್ತೆಯಲ್ಲಿ ಹೋಗುತ್ತಿದ್ದ ಟ್ರ್ಯಾಕ್ಟರ್ ಗೆ ನಾನೇ ಗುದ್ದಿ ಅಪಘಾತ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ನ ಹಿಂಭಾಗ ಇದ್ದ ಟ್ರೇಲರ್ ನ ಬಲಭಾಗ ನನ್ನ ಮೋಟಾರ್ ಸೈಕಲ್ ನ ಎಡಭಾಗಕ್ಕೆ ಡಿಕ್ಕಿ ಪಡಿಸಿರುತ್ತದೆ. ರಸ್ತೆಯಲ್ಲಿ ವಾಹನಗಳು ಒಂದರ ಹಿಂದೆ ಒಂದು ಚಲಿಸುವಾಗ ವಾಹನದ ನಡುವೆ ಅಂತರವನ್ನು ಕಾಪಾಡಿಕೊಳ್ಳುವುದು ನಮ್ಮ ಕರ್ತವ್ಯ ಎಂದರೆ ಸರಿ. ಆ ರೀತಿ ಅಂತರ ಕಾಪಾಡಿಕೊಂಡಿದ್ದರೆ ಅಪಘಾತ ಸಂಭವಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಚಾರಗಳು ಗೊತ್ತಿಲ್ಲ. ಟ್ರ್ಯಾಕ್ಟರ್ ನ ಹಿಂಭಾಗ ಇರುವ ಟ್ರೇಲರ್ ಗೆ signal light ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಅಪಘಾತವು ಸಂಭವಿಸಿದಾಗ ಸಂಜೆ 7.30 ಗಂಟೆ ಆಗಿತ್ತು. ಅಪಘಾತ ಸಂಭವಿಸಿದಾಗ ನಾನು ಒಬ್ಬನೇ ಇದ್ದೆ. ಅಪಘಾತದ ನಂತರ ಕೊಣನೂರು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದೆ. ಕೊಣನೂರಿನ ಆಸ್ಪತ್ರೆಯಲ್ಲಿ ನನಗೆ ಯಾವ ರೀತಿ ಗಾಯಗಳಾಗಿವೆ ಎಂದ ವೈದ್ಯರಿಗೆ ಹೇಳಿದ್ದು

ಅವರು ಬರೆದುಕೊಂಡಿದ್ದಾರೆ. ಕೊಣನೂರಿನಿಂದ ಹೆಚ್ಚಿನ ಚಿಕಿತ್ಸೆಗಾಗಿ ಅರಕಲಗೂಡಿನ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಅರಕಲಗೂಡಿನ ಸರ್ಕಾರಿ ಆಸ್ಪತ್ರೆಯಿಂದ ಹಾಸನದ ಸಂಜೀವಿನಿ ಆಸ್ಪತ್ರೆಗೆ ಅಪಘಾತದ ದಿನವೇ ಹೋಗಿರುತ್ತೇನೆ. ಸಂಜೀವಿನಿ ಆಸ್ಪತ್ರೆಯಲ್ಲಿ ನನಗೆ ಎಡಗಾಲಿನ ಮಂಡಿಗೆ ಶಸ್ತ್ರಚಿಕಿತ್ಸೆ ಮಾಡಿದರು. ನನ್ನ ತಲೆಯ ಎಡಭಾಗಕ್ಕೆ ಪೆಟ್ಟಾಗಿತ್ತು ಹೊಲಿಗೆ ಹಾಕಿದರು.

ನಾನು ಚಿಕಿತ್ಸೆ ಪಡೆದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಅವುಗಳನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನನಗೆ ಗಾಯ ಆಗಿರುವ ಬಗ್ಗೆ ವೈದ್ಯರು ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ. ನಾನು ಚಿಕಿತ್ಸೆ ಪಡೆದ ಬಗ್ಗೆ ಬಿಲ್ಲುಗಳನ್ನು ಹಾಜರುಪಡಿಸಿಲ್ಲ. ನನಗೆ ಚಿಕಿತ್ಸೆಗಾಗಿ 2.5 ಲಕ್ಷ ಖರ್ಚು ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಶಸ್ತ್ರಚಿಕಿತ್ಸೆ ಮಾಡಿ ಮಂಡಿ ಭಾಗಕ್ಕೆ ಪ್ಲೇಟ್ ಅಳವಡಿಸಿಲ್ಲ ಎಂದರೆ ಸರಿಯಲ್ಲ. ನಾನು ಗಾರೆ ಕೆಲಸ, ವ್ಯವಸಾಯ, ಹಾಲಿನ ವ್ಯಾಪಾರ ಮಾಡುವ ಬಗ್ಗೆ ಯಾವುದೇ ದಾಖಲಾತಿಗಳನ್ನು ನೀಡಿಲ್ಲ. ನನಗೆ ತಿಂಗಳಿಗೆ 30 ಸಾವಿರ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ. 4 ರ ಐ.ಎಂ.ವಿ ವರದಿಯಲ್ಲಿ Tractor Radiator Grill ಮುಂದಗಡೆ Press ಆಗಿದೆ ಎಂದು ಬರೆದಿದೆ ಎಂದರೆ ಸರಿ. ಅರಕಲಗೂಡಿನಿಂದ ಹಾಸನದ ಆಸ್ಪತ್ರೆಗೆ ಹೋಗುವಾಗ ನನ್ನ ಜೊತೆ ನನ್ನ ಮಗ ಅವಿನಾಶ್ ಮತ್ತು ಪರಿಚಯಸ್ಥರಾದ ಸುರೇಶ ಇದ್ದರು. ಕೊಣನೂರಿನ ಸರ್ಕಾರಿ ಆಸ್ಪತ್ರೆಯ ಪಕ್ಕದಲ್ಲಿಯೇ ಪೊಲಿಸ್ ಠಾಣೆ ಇದ್ದು ಅಪಘಾತದ ಬಗ್ಗೆ ನಾನಾಗಲೀ ನನ್ನ ಜೊತೆಯವರಾಗಲೀ ದೂರು ನೀಡಿರುವುದಿಲ್ಲ. ನಾನು ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಆಸ್ಪತ್ರೆಗೆ ಬಂದಿರಲಿಲ್ಲ. ಅಪಘಾತಕ್ಕೆ ಸಂಬಂಧಪಟ್ಟಂತೆ ನನ್ನ ಮಗ ಅವಿನಾಶ್ ಪೋಲಿಸರಿಗೆ ದೂರು ನೀಡಿರುತ್ತಾರೆ. ಅಪಘಾತದ ಬಗ್ಗೆ ಮಾಹಿತಿಯನ್ನು ನನ್ನ ಮಗ ಅವಿನಾಶ್ ನಿಗೆ ಸುರೇಶ್ ರವರು ತಿಳಿಸಿರುತ್ತಾರೆ.

ಅಪಘಾತ ಪಡಿಸಿದ ವಾಹನ ಸ್ವಾಮಿಗೌಡರಿಗೆ ಸಂಬಂಧಿಸಿರುತ್ತದೆ. ಟ್ರ್ಯಾಕ್ಟರ್ ನ್ನು ಯಾರು ಚಲಾಯಿಸುತ್ತಿದ್ದರು ಎಂದು ಗೊತ್ತಿಲ್ಲ. ಸ್ವಾಮಿಗೌಡ ರವರು ಚೌಡೇನಹಳ್ಳಿಯವರು. ನಾನು ಟ್ರ್ಯಾಕ್ಟರ್ ನ ಮಾಲೀಕರೊಂದಿಗೆ ಶರೀಕಾಗಿ 2ನೇ ಎದುರುದಾರರ ವಿರುದ್ಧ ಸುಳ್ಳು

ಪ್ರಕರಣ ದಾಖಲು ಮಾಡಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ 3 ದಿನ ತಡವಾಗಿ ದೂರು ನೀಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾರಣ ತಡವಾಗಿ ದೂರು ನೀಡಲಾಗಿದೆ ಎಂದು ನುಡಿಯುತ್ತಾರೆ.

ಹಾಸನದ ಸಂಜೀವಿನಿ ಆಸ್ಪತ್ರೆಯಲ್ಲಿ 26 ದಿನಗಳ ಕಾಲ ಒಳರೋಗಿಯಾಗಿ ಇದ್ದೇನೆ. ಆಸ್ಪತ್ರೆಯಿಂದ ನೀಡಲಾದ ಬಿಡುಗಡೆ ಸಾರಾಂಶವನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತದಿಂದ ನನಗೆ ಯಾವುದೇ ಗಾಯಗಳು ಆಗಿರಲಿಲ್ಲ, ಸುಳ್ಳು ಅರ್ಜಿ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

(ನಾಗೇಶ ಮೂರ್ತಿ ಬಿ.ಕೆ)
ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅರಕಲಗೂಡು